# ಕರ್ನಾಟಕ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 493

ಸದಸ್ಯರ ಹೆಸರು : ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 24.07.2024 (19/07/2024)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಕಳೆದ ಒಂದು ವರ್ಷದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ಎಷ್ಟು ಬೆಳೆ ನಾಶವಾಗಿದೆ ಹಾಗೂ ಎಷ್ಟು ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ;</td><td>ಕಳೆದ ಒಂದು ವರ್ಷದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಉಂಟಾದ ಬೆಳೆಹಾನಿ ಮತ್ತು ರೈತರ ಆತ್ಮಹತ್ಯೆ ಪ್ರಕರಣಗಳ ವಿವರಗಳು ಈ ಕೆಳಕಂಡಂತಿರುತ್ತದೆ.<br><table><tr><th>ಜಿಲ್ಲೆ</th><th>ಬೆಳೆನಾಶ (ಹೆಕ್ಟೇರ್‌ಗಳಲ್ಲಿ)</th><th>ಆತ್ಮಹತ್ಯೆ ಪ್ರಕರಣಗಳು</th></tr><tr><td>ಮೈಸೂರು</td><td>82660.8</td><td>72</td></tr><tr><td>ಚಾಮರಾಜನಗರ</td><td>41625</td><td>02</td></tr></table></td></tr>
<tr><td>(ಆ) ಈ ಆತ್ಮಹತ್ಯೆಗೆ ಹಿಂದಿನ ವರ್ಷದ ತೀವ್ರ ಬರಗಾಲ ಬೆಳೆಹಾನಿ ಹಾಗೂ ಸಾಲದ ಹೊರೆ ಬೆಳೆಗೆ ಉತ್ತಮ ಬೆಲೆ ಇಲ್ಲದೆ ಇರುವುದು ಪ್ರಮುಖ ಕಾರಣವಲ್ಲವೆ;<br><br>(ಇ) ಮೇಲ್ಕಂಡ ಸಮಸ್ಯೆ ನಿವಾರಣೆಗೆ ಸರ್ಕಾರ ರಾಜ್ಯದ ರೈತರ ಸಾಲಮನ್ನಾ ಮಾಡಲು ಕ್ರಮ ಕೈಗೊಳ್ಳುವುದೇ;</td><td>ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ನೀಡಬಹುದಾದ ಪರಿಹಾರದ ಬಗ್ಗೆ ಭಾರತ ಸರ್ಕಾರದ ಗೃಹ ಮಂತ್ರಾಲಯವು, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ಮಾರ್ಗಸೂಚಿಗಳನ್ನು ದಿನಾಂಕ: 11.07.2023ರಂದು ಹೊರಡಿಸಿರುತ್ತದೆ. ಹಾಗಾಗಿ, ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ಭಾರತ ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಮಾತ್ರ ಪರಿಹಾರವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ/ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ನೀಡಲು ಅವಕಾಶವಿರುತ್ತದೆ. ಅದರಂತೆ, ಪ್ರತಿ ರೈತರಿಗೆ ಗರಿಷ್ಠ 02 ಹೆಕ್ಟೇರ್‌ಗೆ ಸೀಮಿತಗೊಳಿಸಿ, ಶೇ.33ರಷ್ಟು ಬೆಳೆಹಾನಿಯಾದ ಮಳೆಯಾಶ್ರಿತ ಜಮೀನುಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.8,500, ನೀರಾವರಿ ಜಮೀನುಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.17,000 ಮತ್ತು ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.22,500/- ಗಳ ಪರಿಹಾರವನ್ನು ಪಾವತಿಸಲು ಅವಕಾಶವಿರುತ್ತದೆ. ಈ ಮಾನದಂಡಗಳ ಆಧಾರದ ಮೇರೆಗೆ ಮುಂಗಾರು ಹಂಗಾಮಿನಲ್ಲಿ ಒಟ್ಟು 38,78,525 ರೈತರುಗಳಿಗೆ ಒಟ್ಟು ರೂ.3535.30 ಕೋಟಿಗಳ ಬೆಳೆಹಾನಿ ಪರಿಹಾರವನ್ನು ನಿಯಮಾನುಸಾರ ಅರ್ಹರೈತರುಗಳಿಗೆ ನೇರವಾಗಿ ಅವರ ಆಧಾರ್ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮೂಲಕ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br><br>ಸಹಕಾರ ಸಂಸ್ಥೆಗಳ ಮೂಲಕ ಪಡೆದಿರುವ ಸಾಲವನ್ನು ಮನ್ನಾ ಮಾಡಲು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ ವ್ಯಾಪ್ತಿಗೆ ಬರುವುದಿಲ್ಲ.</td></tr>
</table>

| | |
|---|---|
| (ಈ) ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಪರಿಣಾಮಕಾರಿ ಕಾರ್ಯಕ್ರಮಗಳಾವುವು? | ರೈತರಿಗಾಗಿ ಶೂನ್ಯ ಬಡ್ಡಿ ದರದಲ್ಲಿ ರೂ.5.00 ಲಕ್ಷದವರೆಗೆ ಅಲ್ಪಾವಧಿ ಬೆಳೆಸಾಲ ಹಾಗೂ ಶೇ.3ರ ಬಡ್ಡಿ ದರದಲ್ಲಿ ರೂ.15.00 ಲಕ್ಷಗಳವರೆಗೆ ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲ ವಿತರಿಸಲಾಗುತ್ತಿದ್ದು ಅದರ ಸದುಪಯೋಗವನ್ನು ರೈತರು ಪಡೆಯಲು ಅವಕಾಶವಿರುತ್ತದೆ.<br><br>2023-24ನೇ ಸಾಲಿನಲ್ಲಿ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾದ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರ ಸಂಸ್ಥೆಗಳಿಂದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಪಡೆದು ಸಾಲ ಮರುಪಾವತಿಸಲು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದನ್ನು ಮನಗಂಡು ಮೈಸೂರು ಮತ್ತು ಚಾಮರಾಜನಗರ ರೈತರನ್ನೊಳಗೊಂಡಂತೆ ರೈತರ ನೆರವಿಗೆ ಧಾವಿಸಲು ಸಹಕಾರ ಸಂಘಗಳಲ್ಲಿ ದಿ:31-12-2023ಕ್ಕೆ ಸುಸ್ತಿ ಆಗಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಕಂತುಗಳನ್ನು ರೈತರು ಫೆಬ್ರವರಿ 2024ರೊಳಗೆ ಪಾವತಿಸಿದಲ್ಲಿ ಬಡ್ಡಿಯನ್ನು ಸರ್ಕಾರವೇ ಭರಿಸುವುದಾಗಿ ತಿಳಿಸಿ ಸರ್ಕಾರ ಆದೇಶ ಸಂಖ್ಯೆ:ಸಿಒ 291 ಸಿಎಲ್‌ಎಸ್ 2023 ದಿ:20.01.2024ರಂದು ಆದೇಶ ಹೊರಡಿಸಿ ಈ ಅವಧಿಯನ್ನು ಮಾರ್ಚ್ 2024ರ ವರೆಗೆ ವಿಸ್ತರಿಸಲಾಗಿತ್ತು.<br><br>ಈ ಯೋಜನೆಯಲ್ಲಿ 65232 ರೈತರಿಗೆ ರೂ.450.06 ಕೋಟಿಗಳ ಸುಸ್ತಿ ಬಡ್ಡಿ ಬಾಕಿ ಉಳಿದಿದ್ದು, ಯೋಜನೆ ಮುಕ್ತಾಯವಾಗಿದ್ದು, ಅಂದಾಜು 40,000 ರೈತರಿಗೆ 213.77 ಕೋಟಿಗಳ ಬಡ್ಡಿ ಮನ್ನಾ ಪ್ರಯೋಜನೆ ದೊರೆಯಲಿದೆ. |

ಕಂಇ 327 ಟಿಎನ್‌ಆರ್ 2024

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು

1463583